**ಭಾರತ ಸರ್ಕಾರ**
**ಜವಳಿ ಸಚಿವಾಲಯ**
**ಅಭಿವೃದ್ಧಿ ಆಯುಕ್ತರು (ಕೈಮಗ್ಗ) ರವರ ಕಚೇರಿ**

# ವೈವಿಧ್ಯಮಯಕ್ಕೆ ಕೈಮಗ್ಗ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳು

## 1. ಪ್ರಸ್ತಾವನೆ

ಭಾರತೀಯ ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯ ಕುರುಹು ಕೈಮಗ್ಗ ನೇಯ್ಗೆಯಾಗಿದೆ. ಕೈಮಗ್ಗದ ಬಟ್ಟೆಗಳಲ್ಲಿ ಕಲಾವಂತಿಕೆ ಮತ್ತು ಗಹನತೆ ಏಕತಾನತೆ ಕಾಣುತ್ತೇವೆ. ಈ ಕ್ಷೇತ್ರದಲ್ಲಿ ಅಧಿಕ ಉದ್ಯೋಗವನ್ನು ಸೃಷ್ಟಿಸಲು ಮತ್ತು ಆರ್ಥಿಕ ಲಾಭ ಹೊಂದಲು ಕೆಳಕಂಡ ಕಾರಣಗಳು ಸಹಕಾರಿಯಾಗಿವೆ. ಅವುಗಳಲ್ಲಿ ನುರಿತ ಸಿಬ್ಬಂದಿಗಳು, ಯಂತ್ರೋಪಕರಣಗಳು, ಸಲಕರಣೆಗಳು ಮತ್ತು ಉತ್ಪಾದನಾ ವ್ಯವಸ್ಥೆಯನ್ನು ಮೇಲ್ಪಂಕ್ತಿಗೆ ಏರಿಸುವುದು, ಗ್ರಾಹಕರ ಅಭಿರುಚಿಗೆ ತಕ್ಕಂತೆ ನೂತನ ವಿನ್ಯಾಸಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ವಸ್ತುಗಳ ಗುಣಮಟ್ಟ ಕಾಯ್ದುಕೊಳ್ಳುವುದು ಸೇರಿದೆ. ಕೈಮಗ್ಗ ನೇಕಾರರು ಮತ್ತು ಕೆಲಸಗಾರರಿಗೆ ಮೇಲ್ಕಂಡ ಅಂಶಗಳ ಬಗ್ಗೆ ಪೂರಕ ಮಾಹಿತಿಯನ್ನು ಒದಗಿಸಬೇಕು.

## 2. ಯೋಜನೆಯ ಉದ್ದೇಶ

ಸಾಕಷ್ಟು ಕಾರ್ಯಕ್ರಮಗಳ ಮೂಲಕ ಉನ್ನತ ತಂತ್ರಜ್ಞಾನವನ್ನು ಹೊಂದುವುದು ವೈವಿಧ್ಯಮಯ ಕೈಮಗ್ಗ ಅಭಿವೃದ್ಧಿ ಯೋಜನೆಯ ಉದ್ದೇಶವಾಗಿದೆ. ಇದರಲ್ಲಿ ಪ್ರಸಕ್ತ ಮಾರುಕಟ್ಟೆಯ ಅಭಿರುಚಿಗೆ ತಕ್ಕಂತೆ ನೇಯ್ಗೆಗಾರರ ಕೌಶಲ್ಯ, ವಿನ್ಯಾಸ, ಉತ್ಪನ್ನಗಳನ್ನು ಅಭಿವೃದ್ಧಿಗೊಳಿಸುವುದು ಸೇರಿದೆ. ಹೀಗೆ ಮಾಡುವುದರಿಂದ ಕೈಮಗ್ಗ ನೇಕಾರರ ಉತ್ಪನ್ನ ಮತ್ತು ಸಂಪಾದನೆಗಳನ್ನು ಹೆಚ್ಚಿಸಬಹುದು. ಯೋಜನೆಯ ಮುಖ್ಯ ಗುರಿಗಳೆಂದರೆ:

1.ವಸ್ತುಪ್ರದರ್ಶನ ಮತ್ತು ಚರ್ಚಾಗೋಷ್ಠಿಗಳನ್ನು ಏರ್ಪಡಿಸುವ ಮೂಲಕ ವಿನ್ಯಾಸ ಅಭಿವೃದ್ಧಿ ಮತ್ತು ತಂತ್ರಜ್ಞಾನ ಹೆಚ್ಚಳದ ಮೂಲಕ ನೇಕಾರರ ಸೇವಾ ಕೇಂದ್ರದ (ಡಬ್ಲ್ಯೂಎಸ್‌ಸಿ) ಕಾರ್ಯಚಟುವಟಿಕೆಗಳನ್ನು ಬಲಪಡಿಸುವುದು.

2.ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ (ಐಐಎಚ್‌ಟಿ)ಯಲ್ಲಿ ಆಧುನಿಕ ಸೌಲಭ್ಯ, ಯಂತ್ರೋಪಕರಣ ಮತ್ತು ಉನ್ನತ ತಂತ್ರಜ್ಞಾನವನ್ನು ಒದಗಿಸಲು ಮೂಲಭೂತ ಸೌಕರ್ಯಗಳ ಹೆಚ್ಚಳ.

3.ಕೈಮಗ್ಗ ಉದ್ಯಮದ ತಾಂತ್ರಿಕ ಮಾನವ ಸಂಪನ್ಮೂಲ ಅಗತ್ಯಗಳನ್ನು ಸಾಕಾರಗೊಳಿಸಲು ಹೊಸ ನೇಕಾರರ ಸಏವಾ ಕೇಂದ್ರಗಳು ಮತ್ತು ಐಐಹೆಚ್‌ಟಿಗಳ ಸ್ಥಾಪನೆ ಮತ್ತು ತನ್ಮೂಲಕ ಈ ವಲಯದಲ್ಲಿ ಉದ್ಯೋಗಾವಕಾಶ ಸೃಷ್ಠಿಸುವುದು.

4.ಬದಲಾಗುತ್ತಿರುವ ತಂತ್ರಜ್ಞಾನ, ಉತ್ಪಾದನಾ ಕೌಶಲ್ಯತೆ, ಮಾರುಕಟ್ಟೆಯ ಅಧ್ಯಯನ, ಕ್ಯಾಡ್ ಸಾಫ್ಟ್‌ವೇರ್ ಮೂಲಕ ವಿನ್ಯಾಸ ಅಭಿವೃದ್ಧಿ ಇವುಗಳನ್ನು ಸಾಕಾರಗೊಳಿಸಲು ಹೊಸ ನೇಕಾರರ ಸೇವಾ ಕೇಂದ್ರಗಳು ಮತ್ತು ಐಐಎಚ್‌ಟಿಯ ಸ್ಥಾಪನೆ.

5.ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಕೈಮಗ್ಗ ವಲಯದಲ್ಲಿ ಜವಳಿ ಉದ್ದಿಮೆಗೆ ಪೂರಕವಾದ ಸಾಂಪ್ರದಾಯಿಕ ಮತ್ತು ಆಧುನಿಕ ವಿನ್ಯಾಸಗಳನ್ನು ಒದಗಿಸಲು ರಾಷ್ಟ್ರೀಯ ಜವಳಿ ವಿನ್ಯಾಸ ಕೇಂದ್ರದ ಕಾರ್ಯಚಟುವಟಿಕೆಗಳ ವಿಸ್ತಾರ.

6.ಕೈಮಗ್ಗ ವಲಯದಲ್ಲಿ ನಿಖರ ಮಾಹಿತಿ ಸಂಗ್ರಹಣೆಗೆ ಮೂರನೇ ಕೈಮಗ್ಗ ಗಣತಿ ಮಾಡುವುದು ಮತ್ತು ಈ ವಲಯದ ನೇಕಾರರಿಗೆ ಅನುಕೂಲವಾಗುವಂತಹ ಫಲಪ್ರದ ಯೋಜನೆಗಳನ್ನು ರೂಪಿಸುವುದು ಸೇರಿದೆ.

7.ಕೈಮಗ್ಗ ನೇಕಾರರಿಗೆ ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಅವರನ್ನು ಪತ್ತೆ ಹಚ್ಚುವುದು, ಹೆಸರನ್ನು ನೊಂದಾಯಿಸಿಕೊಳ್ಳುವುದು ಮತ್ತು ಪ್ರಮಾಣ ಪತ್ರಗಳನ್ನು ನೀಡುವುದು ಸೇರಿದೆ. ಕೈಮಗ್ಗ ನೇಕಾರರಿಗೆ ಗುರುತಿನ ಚೀಟಿ ವಿತರಿಸುವ ಮೂಲಕ ನಿಜವಾದ ನೇಕಾರರನ್ನು ಗುರುತಿಸಿ ಅವಶ್ಯವಾದ ಕೈಮಗ್ಗ ಯೋಜನೆಗಳ ಲಾಭಗಳನ್ನು ಅವರಿಗೆ ಒದಗಿಸಬಹುದು.

## 3. ಯೋಜನೆಯ ಭಾಗಗಳು

ಯೋಜನೆಯು ಈ ಕೆಳಕಂಡ ಭಾಗಗಳನ್ನು ಒಳಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಭಾಗಗಳು |
|---|---|
| 3.1 | ನೇಕಾರರ ಸೇವಾ ಕೇಂದ್ರ / ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಬಲವರ್ಧನೆ |
| 3.2 | ರಾಷ್ಟ್ರೀಯ ಜವಳಿ ವಿನ್ಯಾಸ ಕೇಂದ್ರ (ಎನ್‌ಸಿಟಿಡಿ) |
| 3.3 | ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) |
| 3.4 | ಜಮ್ಮು ಮತ್ತು ಕಾಶ್ಮೀರ ಉಣ್ಣೆ ಯೋಜನೆ |
| 3.5 | ನೇಕಾರರ ಸೇವಾ ಕೇಂದ್ರ (ಜಮ್ಮು ಮತ್ತು ಕಾಶ್ಮೀರ) |
| 3.6 | ಕೇಂದ್ರ ವಲಯದಡಿ ಹೊಸ ಐಐಎಚ್‌ಟಿ ಸ್ಥಾಪನೆ |
| 3.7 | ಮೂರನೇ ಕೈಮಗ್ಗ ಗಣತಿ ಮತ್ತು ಕೈಮಗ್ಗ ನೇಕಾರರಿಗೆ ಗುರುತಿನ ಚೀಟಿ ವಿತರಣೆ |

### 3.1 ನೇಕಾರರ ಸೇವಾ ಕೇಂದ್ರ / ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆಯ ಬಲವರ್ಧನೆ

ವಿದ್ಯುತ್ ಮಗ್ಗ ಮತ್ತು ಗಿರಣಿಗಳಿಂದ ಕೈಮಗ್ಗ ವಲಯದ ಮುಂದೆ ಸಾಕಷ್ಟು ಸವಾಲುಗಳಿವೆ. ಆದ್ದರಿಂದ, ಸಾಧ್ಯವಾದಷ್ಟು ತಂತ್ರಜ್ಞಾನ ಮಾಹಿತಿಗಳನ್ನು ಒದಗಿಸುವ ಮೂಲಕ ಈ ವಲಯವನ್ನು ನವೀಕರಿಸದ ಹೊರತು ಸವಾಲುಗಳನ್ನು ಸಮರ್ಪಕವಾಗಿ ಎದುರಿಸಲು ಆಗುವುದಿಲ್ಲ. ಆದ್ದರಿಂದ ನೇಕಾರರ ಸೇವಾ ಕೇಂದ್ರ (ಡಬ್ಲ್ಯೂಎಸ್‌ಸಿ) ಮತ್ತು ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ (ಐಐಎಚ್‌ಟಿ)ಗಳನ್ನು ಬಲಪಡಿಸುವ ಅವಶ್ಯಕತೆ ಇದೆ.

ಪ್ರಸ್ತುತ, ನೇಕಾರರಿಗೆ ಕೌಶಲ್ಯ ತರಬೇತಿ ನೀಡಲು, ಉತ್ಪಾದನಾ ಮಟ್ಟ ಹೆಚ್ಚಿಸಿಕೊಳ್ಳುವಂತೆ ಮಾಡಲು 25 ಡಬ್ಲ್ಯೂಎಸ್‌ಸಿ ಮತ್ತು 4 ಐಐಎಚ್‌ಟಿಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಹೊಸ ವಿನ್ಯಾಸಗಳನ್ನು ರೂಪಿಸಲು ಮತ್ತು ಸಾಂಪ್ರದಾಯಿಕ ವಿನ್ಯಾಸಗಳಿಗೆ ಮರು ಜೀವ ಕೊಡಲು ಅವು ನೆರವಾಗುತ್ತವೆ. ನೇಕಾರರ ಮನೆ ಬಾಗಿಲಿಗೇ ಉನ್ನತ ತಂತ್ರಜ್ಞಾನ ಒದಗಿಸುವುದು, ಹೊಸ ವಿನ್ಯಾಸಗಳ ಪರಿಚಯ ಮಾಡಿಸುವುದು ಡಬ್ಲ್ಯೂಎಸ್‌ಸಿಯ ಗುರಿಯಾಗಿದೆ. ಕೈಮಗ್ಗ ವಲಯಕ್ಕೆ ಬೇಕಾದ ನುರಿತ ಸಿಬ್ಬಂದಿಗಳನ್ನು ಒದಗಿಸುವುದು ಮತ್ತು ಕೈಮಗ್ಗ ವಲಯಕ್ಕೆ ಪೂರಕವಾದ ಪ್ರಾಯೋಗಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜವಾಬ್ದಾರಿಯನ್ನು ಐಐಎಚ್‌ಟಿ ವಹಿಸಿಕೊಳ್ಳುತ್ತದೆ.

ಡಬ್ಲ್ಯೂಎಸ್‌ಸಿ ಮತ್ತು ಐಐಎಚ್‌ಟಿಗಳ ಬಲವರ್ಧನೆಗೆ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ:

1. ವಿನ್ಯಾಸ ಪ್ರದರ್ಶನ ಮತ್ತು ಬಣ್ಣ ಹಚ್ಚುವ ಕಾರ್ಯಾಗಾರ
2. ಕೇಂದ್ರ ವಲಯದಡಿ ಡಬ್ಲ್ಯೂಎಸ್‌ಸಿ ಸ್ಥಾಪನೆ
3. ಡಬ್ಲ್ಯೂಎಸ್‌ಸಿ / ಐಐಎಚ್‌ಟಿಗಳಿಗೆ ಮೂಲಭೂತ ಸೌಕರ್ಯ
4. ರಾಜ್ಯಗಳಲ್ಲಿ ಡಬ್ಲ್ಯೂಎಸ್‌ಸಿ / ಐಐಎಚ್‌ಟಿ ಘಟಕಗಳ ಸ್ಥಾಪನೆ
5. ಜೋಧ್‌ಪುರದಲ್ಲಿನ ಐಐಎಚ್‌ಟಿ ಮುಂದುವರಿಕೆ
6. ಡಬ್ಲ್ಯೂಎಸ್‌ಸಿ / ಐಐಎಚ್‌ಟಿ ಕೇಂದ್ರಗಳಲ್ಲಿ ತರಬೇತಿ ಸಿಬ್ಬಂದಿ

### 3.1.1 ವಿನ್ಯಾಸ ಪ್ರದರ್ಶನ ಮತ್ತು ಬಣ್ಣ ಹಚ್ಚುವ ಕಾರ್ಯಾಗಾರ

ಪ್ರಯೋಗಶಾಲೆಯಿಂದ ಭುವಿಗೆ ಎಂಬ ಕಲ್ಪನೆಯಲ್ಲಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ದೂರದೂರದ ಪ್ರದೇಶಗಳಲ್ಲೂ ತಂತ್ರಜ್ಞಾನವನ್ನು ಪಸರಿಸುವುದು ಇದರ ಉದ್ದೇಶವಾಗಿದೆ. 1995–96 ರಿಂದ ಇಲ್ಲಿಯವರೆಗೆ ಡಬ್ಲ್ಯೂಎಸ್‌ಸಿ ಬಣ್ಣ ಹಚ್ಚುವ ಮತ್ತು ವಿನ್ಯಾಸದ ಕಾರ್ಯಾಗಾರಗಳನ್ನು ನಡೆಸುತ್ತಿದೆ. ಕಾರ್ಯಾಗಾರಗಳು ಕೈಮಗ್ಗ ವಲಯಕ್ಕೆ ಸಹಕಾರಿಯಾಗಿರುವ ಸಂಗತಿಯನ್ನು ಮನಗಂಡ ನಂತರ 11ನೇ ಯೋಜನೆಯಡಿ ಅದನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಇಂತಹ ಕಾರ್ಯಾಗಾರಗಳು ಕೈಮಗ್ಗಗಳು ಕೇಂದ್ರೀಕೃತವಾದ ಸ್ಥಳದಲ್ಲಿ ಡಬ್ಲ್ಯೂಎಸ್‌ಸಿ ನಡೆಸುವ ಮೂಲಕ ಬಣ್ಣ ಹಚ್ಚುವ ತಂತ್ರಜ್ಞಾನದ ಅಭಿವೃದ್ಧಿಗೆ ನೆರವಾಗುತ್ತದೆ ಮತ್ತು ನೇಕಾರರ ಮನೆ ಬಾಗಿಲಲ್ಲಿ ವಿನ್ಯಾಸಗಳು ದೊರೆಯುವಂತೆ ಮಾಡಲಾಗುವುದು. ಈ ಕಾರ್ಯಾಗಾರಗಳು ಅವಧಿ 2–3 ದಿನಗಳು. ಪ್ರತಿಯೊಂದು ಕಾರ್ಯಕ್ರಮಕ್ಕೂ 10,000 ರೂ ನಿಗದಿಯಾಗಿದೆ ಮತ್ತು ಪ್ರತಿ ಕಾರ್ಯಾಗಾರವು 100 ಫಲಾನುಭವಿಗಳಿಗೆ ನೆರವಾಗಲಿದೆ. ಪ್ರತಿವರ್ಷ ಇಂತಹ 250 ಕಾರ್ಯಾಗಾರಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ವಸ್ತು ಆಧಾರಿತ ಹಣಕಾಸು ವಿವರಗಳು ಈ ಕೆಳಕಂಡಂತಿವೆ.

| | | |
|---|---|---|
| ಅ. | ಮೂಲಭೂತ ಸೌಕರ್ಯಗಳ ಸಿದ್ಧತೆ<br>(ಕುರ್ಚಿ, ಮೇಜು ಮತ್ತು ಶಾಮಿಯಾನಗಳನ್ನು ಬಾಡಿಗೆಗೆ ತರುವುದು) | 3,000.00 ರೂ. |
| ಆ. | ವಿನ್ಯಾಸ ಮತ್ತು ಬಟ್ಟೆಗಳ ಪ್ರದರ್ಶನ | 1,500.00 ರೂ. |
| ಇ. | ಚಿತ್ರಕಲೆಗೆ ಬೇಕಾದ ವಸ್ತು, ನೇಯ್ಗೆ, ವಸ್ತ್ರ, ಬಣ್ಣ ಮತ್ತು ವಿನ್ಯಾಸಕ್ಕೆ ಬೇಕಾದ ರಾಸಾಯನಿಕ ವಸ್ತುಗಳು, ಮುದ್ರಣ ಸಾಮಗ್ರಿಗಳಿಗೆ ಬೇಕಾದ ಕಚ್ಚಾ ವಸ್ತುಗಳ ಖರೀದಿ | 2,000.00 ರೂ. |
| ಊ, | ಪ್ರಚಾರ ಸಾಮಗ್ರಿಗಳು (ಆಮಂತ್ರಣ ಪತ್ರಿಕೆ, ಬ್ಯಾನರ್, ಕರಪತ್ರ ಇತ್ಯಾದಿ) | 1,000.00 ರೂ. |
| ಋ. | ತರಬೇತಿಗೆ ಬಂದವರಿಗೆ ತಿಂಡಿ ತಿನಿಸು.<br>ಪ್ರತಿಯೊಬ್ಬ ತರಬೇತಿ ವಿದ್ಯಾರ್ಥಿಗೆ 10 ರೂಪಾಯಿಯಂತೆ | 1,000.00 ರೂ. |
| ಎ. | ಸಾರಿಗೆ (ಪ್ರದರ್ಶನ ವಸ್ತುಗಳನ್ನು ಸಾಗಿಸಲು ಟ್ಯಾಕ್ಸಿ/ಜೀಪುಗಳ ಬಾಡಿಗೆ) | 1,000.00 ರೂ. |
| ಏ. | ಇತರೆ ಖರ್ಚುಗಳು | 500.00 ರೂ. |
| | ಒಟ್ಟು | 10,000.00 ರೂ. |

**ಅರ್ಹ ಫಲಾನುಭವಿಗಳು :** ಕೈಮಗ್ಗ ನೇಕಾರರು

**ಕಾರ್ಯಾಗಾರ ನಿರ್ವಾಹಕರು :** ರಾಜ್ಯ ಸರ್ಕಾರದ ಸಹಯೋಗದೊಂದಿಗೆ ನೇಕಾರರ ಸೇವಾ ಕೇಂದ್ರಗಳು ಕಾರ್ಯಗಾರ ನಿರ್ವಾಹಕರಾಗಿರುತ್ತಾರೆ.

**ಬಂಡವಾಳ ಹೂಡಿಕೆ ವಿಧಾನ :** ಭಾರತ ಸರ್ಕಾರವು ಶೇ. 100ರಷ್ಟು ಹಣ ಸಹಾಯ ಮಾಡುತ್ತದೆ.

### 3.1.2 ಕೇಂದ್ರ ವಲಯದಡಿ ಡಬ್ಲ್ಯೂಎಸ್‌ಸಿ ಸ್ಥಾಪನೆ

ಭಾರತ ಸರ್ಕಾರವು ಕೇಂದ್ರ ವಲಯದಡಿ ಹೊಸ ಡಬ್ಲ್ಯೂಎಸ್‌ಸಿ ಸ್ಥಾಪಿಸಲು ಇದು ನೆರವಾಗುತ್ತದೆ. ಕೈಮಗ್ಗಗಳೇ ಕೇಂದ್ರೀಕೃತವಾದ ಸ್ಥಳಗಳಲ್ಲಿ ಮತ್ತು ಹೊಸ ರಾಜ್ಯಗಳಲ್ಲಿ ಜವಳಿ ಮತ್ತು ಜ್ಯೂಟ್ ಉದ್ದಿಮೆಗಳಲ್ಲಿ ಮತ್ತಷ್ಟು ಹೊಸ ಡಬ್ಲ್ಯೂಎಸ್‌ಸಿ ಸ್ಥಾಪಿಸುವಂತೆ 11ನೇ ಯೋಜನಾ ಆಯೋಗ ಸೂಚಿಸಿದೆ.

ಮುಂದಿನ 5 ವರ್ಷಗಳಲ್ಲಿ ಕೇಂದ್ರ ವಲಯದಡಿ ಡಬ್ಲ್ಯೂಎಸ್‌ಸಿ ಸ್ಥಾಪನೆಗೆ 7.71 ಕೋಟಿ ರೂ. ಖರ್ಚಾಗ ಬಹುದೆಂದು ಅಂದಾಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| ಕ್ರ. ಸಂ. | ಸಾಮಗ್ರಿ | ಅವಕಾಶ |
|---|---|---|
| **ಎ** | **ಮೂಲಭೂತ ಸೌಕರ್ಯ (ಪುನರಾವೃತ್ತಿಯಲ್ಲದ)** | |
| 1. | ಭೂಮಿ | ರಾಜ್ಯಸರ್ಕಾರದಿಂದ ಉಚಿತ ಭೂಮಿ |
| 2. | ಬಂಡವಾಳ ಹೂಡಿಕೆ | ಕಟ್ಟಡ ನಿರ್ಮಾಣಕ್ಕೆ 500 ಲಕ್ಷ ರೂ. |
| 3. | ಪೀಠೋಪಕರಣಗಳು | ಐದು ಲಕ್ಷ |
| 4. | ಯಂತ್ರೋಪಕರಣಗಳು ಮತ್ತು ಕ್ಯಾಡ್/ಕ್ಯಾಮ್/ | 15 ಲಕ್ಷ ರೂ. |

| | | |
|---|---|---|
| | ಗಣಕಯಂತ್ರಗಳು/ಪರೀಕ್ಷಾ ಉಪಕರಣಗಳು | |
| | ಒಟ್ಟು ಅನಾವರ್ತಕ ಮೊತ್ತ (ಎ) | 520 ಲಕ್ಷ ರೂ. |
| ಬಿ. | ಸಿಬ್ಬಂದಿಗಳ ವೇತನ ಮತ್ತಿತರೆ ಖರ್ಚುಗಳು | |
| 1. | 29 ಹುದ್ದೆಗಳಿಗೆ ವೇತನ (3.1.4 (ಬಿ)ಯಲ್ಲಿ ತಿಳಿಸಿದಂತೆ) | 35 ಲಕ್ಷ ರೂ. |
| 2. | ಒಟಿಎ, ಟಿಎ, ಒಇ, ಸಣ್ಣ ಕೆಲಸಗಳು, ಆರ್‌ಆರ್‌ಟಿ, ಶಿಷ್ಯವೇತನ ಸೇರಿದಂತೆ ಇತರೆ ಖರ್ಚುಗಳು | 15.20 ಲಕ್ಷ ರೂ. |
| | ಆವರ್ತಕ ವೆಚ್ಚಗಳ ಮೊತ್ತ (ಬಿ) | ಪ್ರತಿವರ್ಷಕ್ಕೆ 50.2 ಲಕ್ಷ ಐದು ವರ್ಷಕ್ಕೆ 251 ಲಕ್ಷ ರೂಪಾಯಿಗಳು |
| | ಅಂದರೆ | |
| | ಒಟ್ಟು ಮೊತ್ತ (ಎ+ಬಿ) | ಐದು ವರ್ಷಕ್ಕೆ 771 ಲಕ್ಷ ರೂ.ಗಳು |

### 3.1.3 ಡಬ್ಲ್ಯೂಎಸ್‌ಸಿ / ಐಐಎಚ್‌ಟಿಗಳಿಗೆ ಮೂಲಭೂತ ಸೌಕರ್ಯ

ಹಾಲಿ ಇರುವ 25 ಡಬ್ಲ್ಯೂಎಸ್‌ಸಿಯಲ್ಲಿ 10 ಡಬ್ಲ್ಯೂಎಸ್‌ಸಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಒಳ್ಳೆಯ ವಾತಾವರಣ ಕಲ್ಪಿಸಲು ಮತ್ತು ಅನವಶ್ಯಕವಾಗಿ ಖರ್ಚಾಗುತ್ತಿರುವ ಬಾಡಿಗೆ ಹಣ ಉಳಿಸುವ ಸಲುವಾಗಿ ಎಲ್ಲಾ ಡಬ್ಲ್ಯೂಎಸ್‌ಸಿ ಕಚೇರಿಗಳನ್ನು ಸ್ವಂತ ಕಟ್ಟಡಗಳಲ್ಲೇ ಉಳಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಅದಕ್ಕೆ ಸೂಕ್ತವಾದ ಭೂಮಿ ಮತ್ತು ಕಚೇರಿ ನಿರ್ಮಾಣ ಕಾರ್ಯ ಮತ್ತು ಸಿಬ್ಬಂದಿ ವಸತಿಗೃಹಗಳನ್ನು 11ನೇ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಚಮೋಲಿ, ಪಾಣಿಪಟ್, ಕಣ್ಣೂರ್, ಕಲ್ಕತ್ತ ಮತ್ತು ಇಂಫಾಲ್‌ನಲ್ಲಿ ಹೊಸ ಡಬ್ಲ್ಯೂಎಸ್‌ಸಿಯ ಕಟ್ಟಡಗಳ ನಿರ್ಮಾಣ ಮತ್ತು ಐಐಎಚ್‌ಟಿ ಕೇಂದ್ರಗಳ ವಿಸ್ತರಣೆಯನ್ನು ವಾರಣಾಸಿ ಮತ್ತು ಜೋಧ್‌ಪುರ್‌ನಲ್ಲಿ ಕೈಗೊಳ್ಳಲಾಗುತ್ತದೆ. ಇತರೆ ಡಬ್ಲ್ಯೂಎಸ್‌ಸಿ ಮತ್ತು ಐಐಎಚ್‌ಟಿ ಕೇಂದ್ರಗಳ ನಿರ್ಮಾಣ/ವಿಸ್ತರಣೆ/ಜೀರ್ಣೋದ್ಧಾರ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಭರಿಸಲಾಗುವುದು. ಇದರಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಬ್ಲ್ಯೂಎಸ್‌ಸಿ ಭೂಮಿ ಖರೀದಿಸಲು ತಗಲುವ ವೆಚ್ಚವೂ ಸೇರಿದೆ.

<u>ಯೋಜನೆಯನ್ನು ಅನುಷ್ಠಾನಕ್ಕೆ ತರುವ ಏಜೆನ್ಸಿಗಳು:</u> ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಇವರ ಮೇಲ್ವಿಚಾರಣೆಯಲ್ಲಿ ಡಬ್ಲ್ಯೂಎಸ್‌ಸಿ / ಐಐಎಚ್‌ಟಿ ಇದನ್ನು ಕಾರ್ಯರೂಪಕ್ಕೆ ತರಲಾಗುವುದು

ಬಂಡವಾಳ ಹೂಡಿಕೆ ವಿಧಾನ: ಪೂರ್ಣ ಖರ್ಚನ್ನು ಕೇಂದ್ರಸರ್ಕಾರವೇ ಭರಿಸುವುದು.

### 3.1.4 ರಾಜ್ಯ ವಲಯದಡಿ ನೇಕಾರರ ಸೇವಾ ಕೇಂದ್ರ (ಡಬ್ಲ್ಯೂಎಸ್‌ಸಿ) / ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ (ಐಐಎಚ್‌ಟಿ) ಸ್ಥಾಪನೆಗೆ ಹಣಕಾಸು ನೆರವು

ರಾಜ್ಯ ಸರ್ಕಾರಗಳಿಂದ ಕಾಲ ಕಾಲಕ್ಕೆ ತಕ್ಕಂತೆ ಬರುವ ಬೇಡಿಕೆಗಳಿಗೆ ಅನುಗುಣವಾಗಿ ಆಯಾ ರಾಜ್ಯಗಳಲ್ಲಿ ಡಬ್ಲ್ಯೂಎಸ್‌ಸಿ ಮತ್ತು ಐಐಎಚ್‌ಟಿಗಳನ್ನು ಸ್ಥಾಪಿಸಲಾಗುವುದು. 10ನೇ ಯೋಜನೆಯಲ್ಲಿ ತೀರ್ಮಾನಿಸಿದಂತೆ ರಾಜ್ಯಗಳಲ್ಲಿ ಇಂತಹ ಕೇಂದ್ರಗಳ ಸ್ಥಾಪನೆಗೆ ಒಂದೇ ಬಾರಿಗೆ ಹಣ ನೀಡಲು ಕೇಂದ್ರ ಸರ್ಕಾರ ನೆರವು ನೀಡಲಿದೆ. ಅದರ ವಿವರಗಳು ಕೆಳಕಂಡಂತಿದೆ.

### 3.1.4 (ಅ) ರಾಜ್ಯ ವಲಯಗಳಲ್ಲಿ ಐಐಎಚ್‌ಟಿ ಸ್ಥಾಪನೆ

ರಾಜ್ಯ ವಲಯಗಳಲ್ಲಿ ಐಐಎಚ್‌ಟಿ ಸ್ಥಾಪಿಸಲು ಭಾರತ ಸರ್ಕಾರ ರಾಜ್ಯ ಸರ್ಕಾರಕ್ಕೆ ಒಮ್ಮೆ ಹಣಕಾಸು ನೆರವನ್ನು ನೀಡುತ್ತದೆ. ಅದರ ವಿವರ ಹೀಗಿದೆ.

ಅ. ಪ್ರಗತಿಯಲ್ಲಿರುವ ಯೋಜನೆಯ ಅನುಷ್ಠಾನಕ್ಕೆ : ಚಂಪಾ (ಚತ್ತೀಸ್‌ಘಡ)ದಲ್ಲಿ ಐಐಎಚ್‌ಟಿ ಕೇಂದ್ರ ಸ್ಥಾಪನೆಗೆ 10ನೇ ಯೋಜನೆಯಲ್ಲೇ ತೀರ್ಮಾನಿಸಲಾಗಿತ್ತು. ನಾನ್ ರೆಕರಿಂಗ್ ವಿಭಾಗದ ಖರ್ಚನ್ನು 1.05 ಕೋಟಿ ರೂ. ಗಳಿಗೆ ಮೀಸಲಿಟ್ಟಿದ್ದೆವು. 10ನೇ ಯೋಜನೆಯಲ್ಲಿದ್ದ ಡಿಡಿಟಿಪಿಯ ಪ್ರಕಾರ ಐಐಎಚ್‌ಟಿ ಸ್ಥಾಪನೆ ಮತ್ತು ಇನ್ನುಳಿದ ವೆಚ್ಚಗಳನ್ನು ಆಯಾ ರಾಜ್ಯಸರ್ಕಾರಗಳೇ ಭರಿಸಬೇಕು. ಹಣಕಾಸು ಹೂಡಿಕೆಯ ಪ್ರಮಾಣ ಕೆಳಕಂಡಂತಿದೆ.

| ಕ್ರ. ಸಂ. | ಭಾಗಗಳು | ಕೇಂದ್ರ ಸರ್ಕಾರ ಭರಿಸ ಬೇಕಾದ ಮೊತ್ತ | ರಾಜ್ಯ ಸರ್ಕಾರ ಭರಿಸ ಬೇಕಾದ ಮೊತ್ತ |
|---|---|---|---|
| | **ನಾನ್ ರೆಕರಿಂಗ್ ವೆಚ್ಚ** | | |
| 1. | ಭೂಮಿ | – | ರಾಜ್ಯ ಸರ್ಕಾರವೇ ಒದಗಿಸಬೇಕು |
| 2. | ಕಟ್ಟಡ | – | 0.9 ಕೋಟಿ ರೂ. |
| 3. | ಪೀಠೋಪಕರಣ, ಕಚೇರಿಗೆ ಬೇಕಾದ ಯಂತ್ರಗಳ ಖರೀದಿಗೆ, ಸಿಬ್ಬಂದಿಗಳಿಗೆ ಕಾರು ಬಸ್ಸು, ಸಾಧನ ಸಲಕರಣೆಗಳು (ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೆಚ್ಚವನ್ನು 70:30 ಪ್ರಮಾಣದಲ್ಲಿ ಭರಿಸುವುದು) | 1.05 ಕೋಟಿ ರೂ | 0.45 ಕೋಟಿ ರೂ. |
| | **ರಿಕರಿಂಗ್ ವೆಚ್ಚ** | | |
| 4. | ಸಿಬ್ಬಂದಿ ವೇತನ, ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕಚೇರಿ ವೆಚ್ಚ, ಲೇಖನ ಸಾಮಗ್ರಿಗಳು, ಕಚ್ಚಾ ವಸ್ತುಗಳು, ಇತರೆ. | | ಪ್ರತಿ ವರ್ಷ 0.70 ಕೋಟಿಗಳು |

ಬಿ. ಹೊಸ ಪ್ರಸ್ತಾಪಗಳು : ರಾಜ್ಯಗಳಲ್ಲಿ ಹೊಸ ಐಐಎಚ್‌ಟಿ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಒಮ್ಮೆಲೆ 4.28 ಕೋಟಿ ರೂ. ಸಹಾಯಧನವನ್ನು ನೀಡಲಿದೆ. ಅಂದರೆ ನಾನ್ ರಿಕರಿಂಗ್ ಬೆಲೆಯ ಶೇ.40 ರಷ್ಟು ಹಣವನ್ನು 10.69 ಕೋಟಿ ರೂ.ಗಳನ್ನು 11ನೇ ಯೋಜನೆಯಲ್ಲಿ ನೀಡಲಿದೆ. ಹೀಗೆ ನೀಡುವ 10.69 ಕೋಟಿ ಮೊತ್ತದ ವಿವರ ಹೀಗಿದೆ.

| | | |
|---|---|---|
| 1. | ಸ್ಥಳ ಮತ್ತು ಕಟ್ಟಡ | 9.09 ಕೋಟಿ ರೂ. |
| 2. | ಪೀಠೋಪಕರಣ ಖರ್ಚು, ಕ್ಸೆರಾಕ್ಸ್ ಯಂತ್ರ | 0.40 ಕೋಟಿ ರೂ. |
| 3. | ಸಿಬ್ಬಂದಿಗಳಿಗೆ ಕಾರು, ಸಂಸ್ಥೆಗಳಿಗೆ ಬಸ್ಸು | 0.20 ಕೋಟಿ ರೂ. |
| 4. | ಯಂತ್ರೋಪಕರಣ ಮತ್ತು ಸಲಕರಣೆಗಳ ಖರೀದಿಗೆ | 1.00 ಕೋಟಿ ರೂ. |
| | ಒಟ್ಟು | 10.69 ಕೋಟಿ ರೂ. |

ಐಐಎಚ್‌ಟಿ ಪ್ರಾರಂಭಿಸಲು ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರವನ್ನು ಅನೆಕ್ಸರ್–1ರಲ್ಲಿ ಕೊಡಲಾಗಿದೆ.

**ಅನುಪಾಲನಾ ಏಜೆನ್ಸಿ :** ರಾಜ್ಯ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಬೇಕು. ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಇವರ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುವುದು.

**3.1.4 (ಬಿ) ರಾಜ್ಯ ವಲಯದಡಿ ಡಬ್ಲ್ಯೂಎಸ್‌ಸಿ ಸ್ಥಾಪಿಸಲು ಬೇಕಾದ ಹಣಕಾಸು ನೆರವು**

ಈ ಭಾಗದಲ್ಲಿ ನೇಕಾರರು ಇರುವ ಪ್ರದೇಶದಲ್ಲಿ ಡಬ್ಲ್ಯೂಎಸ್‌ಸಿ ಸ್ಥಾಪಿಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರದಿಂದ ಒಮ್ಮೆಲೆ ದೊರೆಯುವ ಹಣಕಾಸಿನ ನೆರವಿನ ವಿವರ ಹೀಗಿದೆ.

ಐದು ವರ್ಷಗಳಲ್ಲಿ ಡಬ್ಲ್ಯೂಎಸ್‌ಸಿ ಸ್ಥಾಪನೆಗೆ ಬೇಕಾದ ಅಂದಾಜು ಹಣ 7.71 ಕೋಟಿ ರೂ. ಅದರಲ್ಲಿ ಒಂದು ಬಾರಿ ಸಿಗುವ ಧನ ಸಹಾಯ 208 ಲಕ್ಷ ರೂ.ಗಳು ಅಂದರೆ 520 ಲಕ್ಷದಲ್ಲಿ ಒಟ್ಟು ಅನಾವರ್ತಕ ವೆಚ್ಚದ ಮೊತ್ತದ ಶೇ.40ರಷ್ಟು ಭಾಗವನ್ನು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ನೀಡುತ್ತದೆ. ಅದರ ವಿವರ ಹೀಗಿದೆ.

| ಅನಾವರ್ತಕ ವೆಚ್ಚ | | |
|---|---|---|
| 1. | ಭೂಮಿ | ರಾಜ್ಯಸರ್ಕಾರದಿಂದ ಉಚಿತವಾಗಿ ಒದಗಿಸಬೇಕು. |
| 2. | ಬಂಡವಾಳ ಹೂಡಿಕೆ | ಆಡಳಿತ, ತಾಂತ್ರಿಕ ಬ್ಲಾಕ್‌ಗಳು ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ಮಾಣಕ್ಕೆ 500 ಲಕ್ಷ ರೂಪಾಯಿಗಳು |
| 3. | ಪೀಠೋಪಕರಣಗಳು | ರೂ.5.00 ಲಕ್ಷಗಳು |
| 4. | ಯಂತ್ರೋಪಕರಣ ಮತ್ತು ಸಾಧನಗಳು (ಅದರಲ್ಲಿ ಕ್ಯಾಡ್ ಸಾಫ್ಟ್‌ವೇರ್/ಗಣಕಯಂತ್ರ/ಪರೀಕ್ಷಾ ಸಾಧನಗಳು) | ರೂ.15.00 ಲಕ್ಷಗಳು |
| | ಒಟ್ಟು | ರೂ.520.00 ಲಕ್ಷಗಳು |
| | ಆವರ್ತಕ ವೆಚ್ಚ | |
| 1. | ಸಂಬಳ (ಪ್ರತಿ ವರ್ಷಕ್ಕೆ) | ರೂ.35.00 ಲಕ್ಷ |

| | | | |
|---|---|---|---|
| | | | |
| 2. | ಇತರೆ ಖರ್ಚುಗಳು ಸಂಬಳ, ಒಟಿಎ, ಪ್ರವಾಸ, ಕಚೇರಿ ವೆಚ್ಚ, ಸಣ್ಣ ಕೆಲಸಗಳು ಬಾಡಿಗೆ ದರ ಮತ್ತು ತೆರಿಗೆಗಳು, ಶಿಷ್ಯವೇತನ (ಪ್ರತಿ ವರ್ಷಕ್ಕೆ) | ರೂ.15.20 | ಲಕ್ಷಗಳು |
| | ಒಟ್ಟು | 50.2 ಲಕ್ಷ ಪ್ರತಿ ವರ್ಷಕ್ಕೆ | |
| | | (251.00 ಲಕ್ಷ ರೂ.ಗಳು 5 ವರ್ಷಕ್ಕೆ) | |

ಅನುಪಾಲನಾ ಏಜೆನ್ಸಿ : ತತ್‌ಸಂಬಂಧ ರಾಜ್ಯಸರ್ಕಾರ

ಡಬ್ಲ್ಯೂಎಸ್‌ಸಿ ಸ್ಥಾಪನೆಗೆ ಬೇಕಾದ ಪೂರ್ಣ ವಿವರವನ್ನು ಅನೆಕ್ಸರ್–2ರಲ್ಲಿ ಕೊಡಲಾಗಿದೆ.

### 3.1.5 ಜೋದ್‌ಪುರ್‌ನ ಐಐಎಚ್‌ಟಿ ಕೇಂದ್ರವನ್ನು ಮುಂದುವರಿಸುವುದು

1993ರಲ್ಲಿ ರಾಜಸ್ಥಾನ ಮತ್ತು ಸಮೀಪದ ರಾಜ್ಯಗಳಿಗೆ ಅನುಕೂಲವಾಗುವಂತೆ ರಾಜಸ್ಥಾನದ ಜೋದ್‌ಪುರ್‌ನಲ್ಲಿ ಐಐಎಚ್‌ಟಿಯನ್ನು ಸ್ಥಾಪಿಸಲಾಯಿತು. ಈ ಕೇಂದ್ರದ ಸಂಬಳ, ದಿನಗೂಲಿ, ಶಿಷ್ಯವೇತನ/ ಸ್ಟೈಫಂಡ್, ಪ್ರವಾಸಿ ಭತ್ಯೆ, ಯಂತ್ರೋಪಕರಣ ಮತ್ತು ಇನ್ನಿತರ ಕಚೇರಿ ವೆಚ್ಚಗಳನ್ನು ಭರಿಸಲು 11ನೇ ಯೋಜನೆಯಲ್ಲಿ ಕೇಂದ್ರ ವಲಯದಲ್ಲಿ ಬರುವ ಐಐಎಚ್‌ಟಿಗೆ ಅವಕಾಶ ನೀಡಿದೆ.

ಈ ಯೋಜನೆಯ ಅಡಿಯಲ್ಲಿ 2007–08ನೇ ಸಾಲಿನಲ್ಲಿ ಯೋಜನಾ ವೆಚ್ಚದಡಿ ಐಐಎಚ್‌ಟಿ ಜೋದ್‌ಪುರ್ ಬರುತಿತ್ತು. ಆ ನಂತರ ಅವುಗಳನ್ನು ಯೋಜನೇತರ ವೆಚ್ಚಕ್ಕೆ ಸೇರಿಸಲಾಗಿದೆ.

### 3.1.6 ಡಬ್ಲ್ಯೂಎಸ್‌ಸಿ / ಐಐಎಚ್‌ಟಿಯಲ್ಲಿರುವ ಸಿಬ್ಬಂದಿಗಳಿಗೆ ತರಬೇತಿ

ಆರ್ಥಿಕ ಸರಳೀಕರಣ, ಹೊಸ ವಿನ್ಯಾಸ ಮತ್ತು ಫ್ಯಾಷನ್ ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆಗೆ ಅನುಸಾರವಾಗಿ ಡಬ್ಲ್ಯೂಎಸ್‌ಸಿ / ಐಐಎಚ್‌ಟಿಯಲ್ಲಿರುವ ಸಿಬ್ಬಂದಿಗಳಿಗೆ ತರಬೇತಿ ನೀಡುವ ಅವಶ್ಯಕತೆ ಇದೆ. ಅವರಿಗೆ ಆಧುನಿಕ ಉತ್ಪಾದನಾ ತಂತ್ರಜ್ಞಾನ, ಮಾರುಕಟ್ಟೆಯ ಆಗುಹೋಗುಗಳ ಅಧ್ಯಯನ, ವೆಚ್ಚದ ಅಧ್ಯಯನ ಮತ್ತು ಕ್ಯಾಡ್ ಸಾಫ್ಟ್‌ವೇರ್ ಬಳಸಿ ವಿನ್ಯಾಸ ಅಭಿವೃದ್ಧಿಯನ್ನು ಹೇಳಿಕೊಡಲಾಗುವುದು. ಈ ವಿಭಾಗದಲ್ಲಿ ಡಬ್ಲ್ಯೂಎಸ್‌ಸಿ/ಐಐಎಚ್‌ಟಿಯ ಸಿಬ್ಬಂದಿಗಳಿಗೆ ಪರಿಣಿತ ಅಂತಾರಾಷ್ಟ್ರೀಯ/ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳಿಂದ ಆಯ್ದ ಕೋರ್ಸ್‌ಗಳಲ್ಲಿ ತರಬೇತಿ ನೀಡಲಾಗುವುದು.

### 3.2 ರಾಷ್ಟ್ರೀಯ ಜವಳಿ ವಿನ್ಯಾಸ ಕೇಂದ್ರ (ಎನ್‌ಸಿಟಿಡಿ)

ರಾಷ್ಟ್ರೀಯ ಜವಳಿ ವಿನ್ಯಾಸ ಕೇಂದ್ರವನ್ನು (ಈ ಮೊದಲು ರಾಷ್ಟ್ರೀಯ ವಿನ್ಯಾಸ ಕೇಂದ್ರ ಎಂದು ಕರೆಯುತ್ತಿದ್ದರು) 2001ರಲ್ಲಿ ಸ್ಥಾಪಿಸಲಾಯಿತು. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಸಾಂಪ್ರದಾಯಿಕ ಮತ್ತು ಆಧುನಿಕ ವಿನ್ಯಾಸಗಳನ್ನು ರೂಪಿಸುವುದರ ಜೊತೆಗೆ ಜವಳಿ ಉದ್ಯಮದಲ್ಲಿ ಅದರಲ್ಲೂ ಕೈಮಗ್ಗ ವಲಯದಲ್ಲಿ ಸಾಕಷ್ಟು ಬೆಳವಣಿಗೆಯ ಅವಕಾಶಗಳನ್ನು ಕಲ್ಪಿಸುವ ಯತ್ನ ಇದಾಗಿದೆ.

<u>**ಎನ್‌ಸಿಟಿಡಿಯ ಗುರಿ ಮತ್ತು ಉದ್ದೇಶ**</u>

1. ಎಲ್ಲಾ ಜವಳಿ ಉದ್ದಿಮೆಗಳು, ವಿನ್ಯಾಸಗಾರರು, ಆಭರಣ ಉತ್ಪಾದಕರು, ಕೈಮಗ್ಗ ನೇಕಾರರು ಮತ್ತು ವಿವಿಧ ವರ್ಗಗಳ ಗುತ್ತಿಗೆದಾರರಿಗೆ ಸಮಾನಾಂತರ ವೇದಿಕೆ ನಿರ್ಮಿಸುವ ಮೂಲಕ ಸುಲಲಿತವಾಗಿ ವಿನ್ಯಾಸಗಳ ಒಳಹರಿವು, ವಿನ್ಯಾಸಗಳ ಮಾರ್ಗದರ್ಶನ ಮತ್ತು ಜವಳಿ ಉದ್ದಿಮೆಯ ಅಂಕಿ ಅಂಶಗಳನ್ನು ಕೊಡುವುದು ಸೇರಿದೆ.

2. ಡಬ್ಲ್ಯೂಎಸ್‌ಸಿಗಳಿಂದ, ಆರ್&ಡಿ ಕೇಂದ್ರಗಳ ಪ್ರಯತ್ನಗಳಿಂದ, ವಸ್ತುಪ್ರದರ್ಶನ ಮತ್ತು ಮಾರುಕಟ್ಟೆ ಅಥವಾ ಇನ್ನಿತರ ಮೂಲಗಳಿಂದ ಸಂಗ್ರಹಿಸಿದ ವಿನ್ಯಾಸಗಳಿಂದ ಕೇಂದ್ರಗಳನ್ನು ನಡೆಸುವುದು, ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

ಡಬ್ಲ್ಯೂಎಸ್‌ಸಿ ಕೇಂದ್ರಗಳ ಸಂಶೋಧನೆ ಮತ್ತು ಅಭಿವೃದ್ಧಿಯ ಪ್ರಯತ್ನಗಳಿಂದ, ಪ್ರದರ್ಶನಗಳಿಂದ ಮತ್ತು ಮಾರುಕಟ್ಟೆ ಅಥವಾ ಇನ್ನಿತರ ಮೂಲಗಳಿಂದ ಸಂಗ್ರಹಿಸಲಾದ ವಿನ್ಯಾಸಗಳಿಂದ ಕೇಂದ್ರಗಳನ್ನು ನಿರ್ವಹಿಸುವುದು ಮತ್ತು ನಡೆಸುವುದು ಸೇರಿದೆ. ಹೀಗೆ ಸಂಗ್ರಹಿಸಲಾದ ವಿನ್ಯಾಸಗಳನ್ನು ದಾಖಲಿಸುವ ಮೂಲಕ ಅವಶ್ಯ ಬಿದ್ದಾಗ ಬೇರೆ ಬಳಕೆದಾರರು ಬಳಸಲು ಅನುವಾಗುತ್ತದೆ.

ಎನ್‌ಸಿಟಿಡಿಯ ಗುರಿ ಮತ್ತು ಉದ್ದೇಶಗಳನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಚಟುವಟಿಕೆಗಳ ಮೂಲಕ ಸಾಧಿಸುತ್ತಾರೆ.

<u>**ಆನ್‌ಲೈನ್ ಚಟುವಟಿಕೆಗಳು:**</u> ಇದರಲ್ಲಿ 1. ಪ್ರವೃತ್ತಿ ಮತ್ತು ಬಣ್ಣಗಳನ್ನು ನಿರ್ಧರಿಸುವುದು 2. ವಿನ್ಯಾಸ 3. ವಿನ್ಯಾಸಗಾರರ ಪ್ಯಾನಲ್ 4. ಜವಳಿಗೆ ಸಂಬಂಧಿಸಿದ ವೆಬ್‌ಸೈಟ್‌ಗಳಿಗೆ ಸಂಪರ್ಕ 5. ಭಾರತದಲ್ಲಿರುವ ಜವಳಿ 6. ಕೈಗಾರಿಕೆ ಮತ್ತು ಎಲ್ಲೋ ಪೇಜಸ್‌ಗಳ ಮಾಹಿತಿ 7. ಸಾಂಪ್ರದಾಯಿಕ ಜವಳಿಗಳ ಸಂಗ್ರಹಾಲಯ

**ಆಫ್‌ಲೈನ್ ಚಟುವಟಿಕೆಗಳು:** ಇದರಲ್ಲಿ 1. ವಿಶೇಷ ಉದ್ದೇಶವನ್ನು ಆಧರಿಸಿದ ವಸ್ತುಪ್ರದರ್ಶನ 2. ಪೇಟೆಂಟ್, ಕಾಪಿರೈಟ್, ತೆರಿಗೆಯೇತರ ತಡೆಗಟ್ಟುಗಳು, ಒಂದುಗೂಡಿಸದಿರುವುದು ಇತ್ಯಾದಿ. ಈ ನಿಟ್ಟಿನಲ್ಲಿ ಕಾನೂನು ಘಟಕವೊಂದನ್ನು ಸ್ಥಾಪಿಸಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸದಾಗಿ ರೂಪಿತಗೊಂಡ ಕಾನೂನು ಮತ್ತು ಪದ್ಧತಿಗಳನ್ನು (ಉದಾ: ಭದ್ರತೆ ಮತ್ತು ಪಾಸ್‌ವರ್ಡ್ ಸುರಕ್ಷತೆ ಇತ್ಯಾದಿ) ತಿಳಿಯಪಡಿಸುವುದು.

11ನೇ ಯೋಜನೆ ಅಡಿಯಲ್ಲಿ ಎನ್‌ಸಿಟಿಡಿಯ ಕಾರ್ಯ ಚಟುವಟಿಕೆಗಳನ್ನು ಬಲಪಡಿಸುವುದು. ಅದಕ್ಕಾಗಿ ವೆಚ್ಚ ಮಾಡುವ ಹಣವನ್ನು :

1. ವೆಬ್‌ಸೈಟ್‌ಗಳನ್ನು ಅಭಿವೃದ್ಧಿ ಪಡಿಸುವುದು
2. ವೆಬ್‌ಸೈಟ್‌ಗಳ ಪ್ರಚಾರ
3. ವಿನ್ಯಾಸಗಳ ಪ್ರವೃತ್ತಿ ಮತ್ತು ಬಣ್ಣಗಳ ಮೂಲವನ್ನು ಹುಡುಕುವುದು.
4. ಸಿದ್ಧಾಂತ ಆಧರಿತ ಸ್ಯಾಂಪಲ್ / ಸಂಖ್ಯಾ ಅಭಿವೃದ್ಧಿ
5. ಸಿದ್ಧಾಂತ ಆಧರಿತ ವಸ್ತುಪ್ರದರ್ಶನ
6. ವಸ್ತುಪ್ರದರ್ಶನಗಳ ಪ್ರಚಾರ
7. ಕೇಂದ್ರ ನಿರ್ವಹಣೆಗೆ ಬೇಕಾದ ಆವರ್ತಕ ವೆಚ್ಚ

### 3.3 ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ)

ಈ ವಿಭಾಗದಲ್ಲಿ ಕೈಮಗ್ಗಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು, ಗುಣಮಟ್ಟ ಶ್ರೇಷ್ಠತೆ, ವಿನ್ಯಾಸ ಅಥವಾ ತಾಂತ್ರಿಕ ಅಭಿವೃದ್ಧಿ, ಅಂಕಿ ಅಂಶಗಳನ್ನು ನಿಗದಿ ಪಡಿಸುವುದು, ಸಂಶೋಧನೆ, ಸಮೀಕ್ಷೆ, ಮಾರುಕಟ್ಟೆ ಮತ್ತು ಮಾಹಿತಿ ಪ್ರಚಾರ ಮಾಡುವುದು. ಇದಕ್ಕಾಗಿ ವಿನ್ಯಾಸಗಳ ದಾಖಲೀಕರಣ ಮತ್ತು ಅಭಿವೃದ್ಧಿ, ತಾಂತ್ರಿಕ ಅಭಿವೃದ್ಧಿ / ವಿಸ್ತರಣೆ, ಗಣಕಯಂತ್ರಗಳನ್ನು ಒದಗಿಸುವುದು ಇತ್ಯಾದಿಗಳಿಗೆ ಹಣಕಾಸು ನೆರವು ನೀಡುತ್ತದೆ. ಅದಲ್ಲದೆ ಕೈಮಗ್ಗ ವಲಯಗಳ ಅಭಿವೃದ್ಧಿಗೆ ಎರವಾಗುವ ಸಂಶೋಧನಾತ್ಮಕ ಕೆಲಸಗಳಿಗೆ ಪ್ರೋತ್ಸಾಹ ಕೊಡುವುದು ಮತ್ತು ಸಂಸ್ಥೆಯ ಸಂಶೋಧನಾತ್ಮಕ ಕಾರ್ಯಕ್ರಮಗಳಿಗೆ ನೆರವು ನೀಡುವುದು ಸೇರಿದೆ.

**ನೆರವಿಗೆ ಅರ್ಹವಾದ ಸಂಸ್ಥೆಗಳು:**

ನೇಕಾರರ ಸಂಸ್ಥೆಗಳಿಗೆ, ಶಾಸನಬದ್ಧ ಸಂಸ್ಥೆಗಳಿಂದ (ಕಂಪನಿ ಆಕ್ಟ್) ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಐಐಎಚ್‌ಟಿ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಬೇಕಾದ ಮೂಲಭೂತ ಸೌಕರ್ಯವುಳ್ಳ ಡಬ್ಲ್ಯೂಎಸ್‌ಸಿ ಸೇರಿದಂತೆ ಮಾನ್ಯತೆ ಪಡೆದ ಸಂಶೋಧನಾ ಸಂಸ್ಥೆಗಳಿಗೆ ವಿಸ್ತೃತ ಸಂಶೋಧನೆ ಮತ್ತು ಅಭಿವೃದ್ಧಿಯ ನೆರವನ್ನು ನೀಡಲಾಗುವುದು.

### 3.4 ಜಮ್ಮು ಮತ್ತು ಕಾಶ್ಮೀರ ಉಣ್ಣೆ ಅಭಿವೃದ್ಧಿ ಯೋಜನೆ

10ನೇ ಪಂಚವಾರ್ಷಿಕ ಯೋಜನೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಉಣ್ಣೆ ಕೈಮಗ್ಗ ವಲಯದ ಅಭಿವೃದ್ಧಿಗೆ ಪ್ರಧಾನಮಂತ್ರಿ ಅವರ ಆರ್ಥಿಕ ಪ್ಯಾಕೇಜ್ ಅನ್ನು ಘೋಷಿಸಲಾಗಿತ್ತು. ಕೈಮಗ್ಗ ವಲಯಕ್ಕೆ ವಿಶೇಷ ಒತ್ತು ಕೊಡಲು 'ಉಣ್ಣೆ ಮತ್ತು ಉಣ್ಣೆ ವಿನ್ಯಾಸಗಳ ಮತ್ತು ಅಭಿವೃದ್ದಿ ಕೇಂದ್ರದ ಸಮಗ್ರ ಯೋಜನೆ'ಯನ್ನು ರೂಪಿಸಲಾಗಿತ್ತು.

ಜಮ್ಮು ಮತ್ತು ಕಾಶ್ಮೀರದ ಉಣ್ಣೆ ಜವಳಿ ವಲಯಕ್ಕೆ ಬೇಕಾದ ತಾಂತ್ರಿಕ ನೆರವು, ಉತ್ಪನ್ನಗಳ ಗುಣಮಟ್ಟ ಕಾಯ್ದುಕೊಳ್ಳುವಿಕೆ, ವಸ್ತುಗಳ ಪರಿಶೋಧನೆ, ವಿನ್ಯಾಸ ಅಭಿವೃದ್ಧಿ, ನೇಯ್ಗೆ ಮಾಡುವ ಮುನ್ನ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆ, ಸಿಬ್ಬಂದಿಗಳಿಗೆ ತರಬೇತಿ, ಅತ್ಯುನ್ನತ ಯಂತ್ರೋಪಕರಣಗಳ ಖರೀದಿ ಮತ್ತು ಸಂಶೋಧನೆಯೂ ಸೇರಿದಂತೆ ಹಲವು ಅಂಶಗಳತ್ತ ಯೋಜನೆಯು ಗಮನ ಹರಿಸುತ್ತದೆ. ಹಾಗಾಗಿ ಇವುಗಳಿಂದ ಜಮ್ಮು ಮತ್ತು ಕಾಶ್ಮೀರ ನೇಕಾರರ ಆದಾಯ ಮತ್ತು ಸಾಮಾಜಿಕ ಪರಿಸ್ಥಿತಿ ಸುಧಾರಣೆಗೆ ಕಾರಣವಾಗುತ್ತದೆ. ಜೊತೆಗೆ ನೇಕಾರರ ತಿಳುವಳಿಕೆ, ಕೌಶಲ್ಯ, ಮೂಲಭೂತ ತಾಂತ್ರಿಕ ತಿಳುವಳಿಕೆ ಮತ್ತು ವ್ಯಾಪಾರ ಅವಕಾಶಗಳ ಮಟ್ಟ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಶ್ರೀನಗರದ ರಾಂಭಾಗ್ ರೇಷ್ಮೆ ಕಾರ್ಖಾನೆಯಲ್ಲಿ 4.93 ಕೋಟಿ ರೂಪಾಯಿಗಳ ಯೋಜನೆಯನ್ನು ಜಾರಿಗೊಳಿಸಿದ್ದಾರೆ.

**<u>ಅನುಷ್ಠಾನ ಏಜೆನ್ಸಿ :</u>** ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತವಾಗಿರುವ ಸೂಚಿಸಿರುವ ಜಮ್ಮುವಿನಲ್ಲಿರುವ ಜಮ್ಮು ಮತ್ತು ಕಾಶ್ಮೀರದ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ

### 3.5 ನೇಕಾರರ ಸೇವಾ ಕೇಂದ್ರ, ಜಮ್ಮು ಮತ್ತು ಕಾಶ್ಮೀರ

2003–04ನೇ ಸಾಲಿನಲ್ಲಿ ಕೇಂದ್ರ ಘಟಕದ ಅಡಿಯಲ್ಲಿ ನೇಕಾರರ ಸೇವಾ ಕೇಂದ್ರವನ್ನು ಶ್ರೀನಗರದಲ್ಲಿ ಪ್ರಾರಂಭಿಸಲಾಯಿತು. ಸೇವಾ ಕೇಂದ್ರವು ರಾಜ್ಯ ಸರ್ಕಾರದ ಕಟ್ಟಡದಲ್ಲಿದೆ ಮತ್ತು ಕೈಮಗ್ಗ ಅಭಿವೃದ್ದಿ ಆಯುಕ್ತರು ವಿನ್ಯಾಸ ಮತ್ತು ಸ್ಯಾಂಪಲ್ ಅಭಿವೃದ್ಧಿ, ತರಬೇತಿಗಳನ್ನು ನಡೆಸಲು ಸಿಬ್ಬಂದಿಗಳನ್ನು ನೇಮಿಸಿದ್ದಾರೆ. ಈ ಸಿಬ್ಬಂದಿಗಳಿಗೆ ತಗಲುವ ಸಂಬಳ, ಕಚೇರಿ ವೆಚ್ಚ, ಯಂತ್ರೋಪಕರಣ / ಪರಿಕರಗಳು, ಕಚ್ಚಾವಸ್ತುಗಳು ಇತ್ಯಾದಿಗಳನ್ನು ಭಾರತ ಸರ್ಕಾರವೇ ವಹಿಸಿಕೊಂಡಿದೆ.

ಶ್ರೀನಗರದ ಡಬ್ಲ್ಯೂಎಸ್‌ಸಿ 2007–08ನೇ ಸಾಲಿನ ಯೋಜನೆಯಲ್ಲಿ ಮುಂದುವರೆದಿತ್ತು. ಆ ನಂತರ ಎಲ್ಲಾ ವೆಚ್ಚಗಳನ್ನು ಶ್ರೀನಗರದ ಡಬ್ಲ್ಯೂಎಸ್‌ಸಿ ಯೋಜನೇತರ ವೆಚ್ಚಗಳಿಂದ ಭರಿಸುತ್ತಿದೆ.

**3.6 ಬಾರಘಡನಲ್ಲಿ ಐಐಎಚ್‌ಟಿ ಕೇಂದ್ರ ಸ್ಥಾಪನೆ**

11ನೇ ಯೋಜನೆಯಲ್ಲಿ ಕೈಮಗ್ಗ ವಲಯಕ್ಕೆ ಪರಿಣಿತ ಸಿಬ್ಬಂದಿಗಳನ್ನು ಪೂರೈಸುವ ಸಲುವಾಗಿ ಐಐಎಚ್‌ಟಿ ಕೇಂದ್ರವನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿದೆ. 2006ರ ಆಗಸ್ಟ್‌ನಲ್ಲಿ ಒರಿಸ್ಸಾಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನಮಂತ್ರಿ ಅವರು ನೀಡಿದ ಆಶ್ವಾಸನೆಯಂತೆ ಬಾರಘಡನಲ್ಲಿ ಐಐಎಚ್‌ಟಿ ಕೇಂದ್ರವನ್ನು ಸ್ಥಾಪಿಸಲಾಗುವುದು. ಅಂಗೀಕಾರದ ನಿಯಮಾವಳಿಗಳಂತೆ ಐಐಎಚ್‌ಟಿ ಸ್ಥಾಪನೆಗೆ 13.05 ಕೋಟಿ ರೂಪಾಯಿಗಳು ಬೇಕಾಗುತ್ತದೆ ಮತ್ತು ಇದರಲ್ಲಿ 35 ಜನ ಸಿಬ್ಬಂದಿಗಳು ಇರುತ್ತಾರೆ.

**ಬಂಡವಾಳ ಹೂಡಿಕೆ ವಿಧಾನ:** ಕಟ್ಟಡ ನಿರ್ಮಾಣಕ್ಕೆ ಅವಶ್ಯವಾದ ಎಲ್ಲಾ ಖರ್ಚುಗಳನ್ನು, ವೇತನ, ಭತ್ಯೆ, ಶಿಷ್ಯವೇತನ/ಸ್ಟೈಫಂಡ್, ಪ್ರವಾಸದ ವೆಚ್ಚ, ಯಂತ್ರೋಪಕರಣ ಮತ್ತು ಪರಿಕರಗಳು, ಇನ್ನಿತರೆ ಕಚೇರಿ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ.

**3.7 ಮೂರನೇ ಕೈಮಗ್ಗ ಗಣತಿ ಮತ್ತು ಕೈಮಗ್ಗ ನೇಕಾರರಿಗೆ ಗುರುತು ಚೀಟಿ ವಿತರಣೆ**

**3.7.1 ಹಿನ್ನೆಲೆ**

ಕೈಮಗ್ಗ ನೇಕಾರರ ಪ್ರಯೋಜನಕ್ಕಾಗಿ ಸಮರ್ಪಕ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯು 1987–88 ಮತ್ತು 1995–96ರಲ್ಲಿ ಗಣತಿ ಕಾರ್ಯವನ್ನು ಹಮ್ಮಿಕೊಂಡಿತ್ತು.

1987–88ರಲ್ಲಿ ಕೈಮಗ್ಗ ನೇಕಾರರ ಮೊದಲ ಗಣತಿ ಕಾರ್ಯವನ್ನು ರಾಷ್ಟ್ರ ಮಟ್ಟದಲ್ಲಿ ನಡೆಸಲಾಗಿತ್ತು. ಗಣತಿ ಕಾರ್ಯದಲ್ಲಿ 27 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿದ್ದವು. ಕೈಮಗ್ಗ ವಲಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಾಹಿತಿಗಳನ್ನು ಪಡೆಯುವುದು ಗಣತಿಯ ಮೂಲ ಉದ್ದೇಶವಾಗಿದೆ. ಇದರಲ್ಲಿ ಅ. ಯೋಜನೆಗಳಿಗೆ ಅವಶ್ಯವಾದ ಮಾಹಿತಿಗಳನ್ನು ಪಡೆಯುವುದು ಮತ್ತು ಬಿ. ಪೂರ್ವ ಮತ್ತು ಪ್ರಸಕ್ತ ಯೋಜನಾ ವಲಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದು ಸೇರಿತ್ತು.

1995–96 ರಲ್ಲಿ ಎರಡನೇ ಗಣತಿ ಕಾರ್ಯಕ್ರಮವನ್ನು ನಡೆಸಲಾಯಿತು. ಇದರಿಂದ ದೊರೆತ ಮಾಹಿತಿಗಳಿಂದ ಅವಶ್ಯವಿರುವ ಪ್ರದೇಶಗಳಿಗೆ ಸೂಕ್ತವಾದ ನೀತಿ ನಿಯಮಗಳನ್ನು ರೂಪಿಸಲಾಯಿತು.

ಕೈಮಗ್ಗ ನೇಕಾರರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ನೇರವಾಗಿ ತಲಪುವಂತೆ ಮಾಡಲು ಗುರುತಿಸುವುದು, ನೊಂದಣಿ ಮಾಡುವುದು ಮತ್ತು ಮಾಲಿಕ ಗುರುತಿನ ಚೀಟಿಗಳನ್ನು ವಿತರಿಸಲು ನೇಕಾರರು ಮತ್ತು ಸಾಹುಕಾರ ನೇಕಾರರು ಯಾವು ಎಂಬುದನ್ನು ವರ್ಗೀಕರಿಸಿ ಪ್ರಮಾಣೀಕರಿಸಬೇಕಾಗಿದೆ.

**3.7.2 ಹೊಸದಾಗಿ ಗಣತಿ ನಡೆಸುವುದು ಮತ್ತು ಗುರುತಿನ ಚೀಟಿ ವಿತರಿಸುವ ಅವಶ್ಯಕತೆ**

11 ವರ್ಷಗಳ ಹಿಂದೆ ಗಣತಿ ಕಾರ್ಯ ನಡೆಸಲಾಗಿದೆ. ಆದರೆ ಈಗ ಕೈಮಗ್ಗ ವಲಯದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೈಮಗ್ಗ ಕ್ಷೇತ್ರದಲ್ಲಿ ನೇಕಾರರಿಗೆ ಅನುಕೂಲವಾಗುವಂತೆ ಪ್ರಸಕ್ತ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಭೌತಿಕ ಬಟ್ಟೆ ಉತ್ಪನ್ನ ಮತ್ತು ಹಣಕಾಸು ಪರಿಸ್ಥಿತಿ, ಉದ್ಯೋಗ ವಿಚಾರಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಪರಿಷ್ಕರಿಸ ಬೇಕಾಗಿದೆ.

ನೇಕಾರರಿಗೆ ಗುರುತಿನ ಚೀಟಿ ವಿತರಿಸುವ ಕಚೇರಿಯ ಪ್ರಯತ್ನದಿಂದ ಅಸಲಿ ನೇಕಾರರನ್ನು ಪತ್ತೆಹಚ್ಚುವ ಮತ್ತು ಅವರಿಗೆ ಯೋಜನೆಯ ಫಲಾನುಭವಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಯೋಜನೆಯ ಫಲಾನುಭವ ಹೊಂದಲು ನೇಕಾರರು ತಮ್ಮ ಗುರುತಿನ ಚೀಟಿಯನ್ನು ಪ್ರದರ್ಶಿಸಬೇಕಾಗುತ್ತದೆ.

**3.7.3 ಯೋಜನೆಯ ಮುಖ್ಯಾಂಶಗಳು**

**3.7.3 (ಅ) ವ್ಯಾಪಕತೆ**

ದೇಶದಾದ್ಯಂತ ಇರುವ ನೇಕಾರರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗುವುದು. ಈ ಸಂಬಂಧ ದೇಶದಾದ್ಯಂತ ಗಣತಿ ಕಾರ್ಯ ನಡೆಯುವುದು.

**3.7.3 (ಬಿ) ಅರ್ಹ ಏಜೆನ್ಸಿಗಳು**

ರಾಷ್ಟ್ರ ಮಟ್ಟದಲ್ಲಿ ಗಣತಿ/ಸಮೀಕ್ಷೆ ನಡೆಸಿದ ಅನುಭವವುಳ್ಳ ಏಜೆನ್ಸಿಗಳು ಅರ್ಜಿ ಸಲ್ಲಿಸಬಹುದು.

**3.7.3 (ಸಿ) ಗಣತಿ ಕಾರ್ಯಕ್ಕೆ ಬೇಕಾದ ಷರತ್ತುಗಳು**

ಉದ್ದೇಶಿತ ಕಾರ್ಯಕ್ರಮದಲ್ಲಿ ನೇಕಾರರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ / ಸಂಬಂಧಿತ ಸಿಬ್ಬಂದಿಗಳ ಗಣತಿ ನಡೆಸುವುದು ಸೇರಿದೆ. ಅವುಗಳೆಂದರೆ:

1.ವಸತಿ ಹೀನ ಮತ್ತು ವಸತಿಯುಳ್ಳ ನಿಖರವಾದ ಮಗ್ಗಗಳನ್ನು ಪತ್ತೆ ಹಚ್ಚುವುದು ಮತ್ತು ದೇಶದಾದ್ಯಂತ ಇರುವ ಕೈಮಗ್ಗಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಕೈಮಗ್ಗಗಳ ಸಂಖ್ಯೆಯನ್ನು ಗುರುತಿಸುವುದು
2.ಮಗ್ಗಗಳ ಆಡಳಿತ ವ್ಯವಸ್ಥೆಯನ್ನು ಅಧ್ಯಯನ ಮಾಡುವುದು
3.ಕೈಮಗ್ಗಗಳ ವಲಯದಲ್ಲಿ ಉದ್ಯೋಗದ ಪರಾಮರ್ಶೆ ನಡೆಸುವುದು ಇದರಲ್ಲಿ ನೇಕಾರರ ಮತ್ತು ಸಂಬಂಧಿತ ಕೆಲಸಗಾರರ ಬಗ್ಗೆ ಅಧ್ಯಯನ ನಡೆಸುವುದು ಸೇರಿದೆ.
4.ಲಿಂಗಾಧರಿತ, ಜಾತಿ ಆಧರಿತ ಮತ್ತು ಧಾರ್ಮಿಕ ಆಧರಿತ ಕೈಮಗ್ಗ ಕೆಲಸಗಾರರನ್ನು ಪತ್ತೆಹಚ್ಚುವುದು.
5.ಗುಣಮಟ್ಟ, ಬಗೆ ಮತ್ತು ಮೌಲ್ಯ ಆಧಾರಿತ ಮಗ್ಗಗಳು ಮತ್ತು ಬಟ್ಟೆಗಳ ಉತ್ಪಾದನೆ ಮೇರೆಗೆ ಸಾಮಾಜಿಕ–ಆರ್ಥಿಕ ನೆಲೆಗಟ್ಟಿನಲ್ಲಿ ಕೈಮಗ್ಗಗಳ ಕೆಲಸಗಾರರನ್ನು ಒಂದುಗೂಡಿಸುವುದು.
6.ಮಗ್ಗ ಮತ್ತು ಕೆಲಸಗಾರರನ್ನು ಆಧರಿಸಿದ ಉತ್ಪನ್ನ
7.ನೇಯ್ಗೆ ಮತ್ತು ಇನ್ನಿತರ ಮೂಲಗಳಿಂದ ನೇಯ್ಗೆ ಘಟಕಗಳಿಗೆ ಬರುವ ಆದಾಯ

8.ಈಶಾನ್ಯ ಪ್ರದೇಶಗಳಲ್ಲಿ ಇರುವ ಕೈಮಗ್ಗ ವಲಯಗಳ ಅವಲೋಕನ
9.ರಾಜ್ಯ ಮಟ್ಟದಲ್ಲಿ ಕೈಮಗ್ಗ ವಲಯಗಳ ಪರಾಮರ್ಶೆ
10.ಗಣತಿ ಕಾರ್ಯದಲ್ಲಿ ಕಂಡು ಬಂದ ಎಲ್ಲಾ ನೇಕಾರರಿಗೂ ಗುರುತಿನ ಚೀಟಿ ವಿತರಣೆ

**3.7.3 (ಡಿ) ಅರ್ಹ ಏಜೆನ್ಸಿಗಳನ್ನು ಆರಿಸುವ ವಿಧಾನ**

ಕೈಮಗ್ಗ ಅಭಿವೃದ್ಧಿ ಆಯಕ್ತರ ಕಚೇರಿ, ಜವಳಿ ಸಚಿವಾಲಯವು ಮೇಲ್ಕಂಡ ಉದ್ದೇಶಗಳನ್ನು ಈಡೇರಿಸುವ ಸಾಮರ್ಥ್ಯ ಹೊಂದಿದ ಅರ್ಹ ಸಂಸ್ಥೆಗಳ ಆಸಕ್ತಿಯನ್ನು ಪರಿಗಣಿಸಿ ಬಿಡ್ಡಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳುತ್ತದೆ. ಸಚಿವಾಲಯವು ಎರಡು ಬಿಡ್ ಮಾದರಿಯಲ್ಲಿ (ಅ. ತಾಂತ್ರಿಕ ಮತ್ತು ಆ. ಹಣಕಾಸು) ಅನುಭವಿ ಮತ್ತು ಪರಿಣಿತ ಸಂಸ್ಥೆಗಳಿಂದ ಎರಡು ಮೊಹರು ಮಾಡಿದ ಲಕೋಟೆಗಳನ್ನು ಟೆಂಡರ್ ಮೂಲಕ ಪಡೆಯುತ್ತದೆ.

**3.7.3 (ಇ) ಸಮಯ ಅವಕಾಶ**

ಗಣತಿ ಕಾರ್ಯವನ್ನು ಕಾರ್ಯ ನಿಗದಿ ಪಡಿಸಿದ ದಿನಾಂಕದಿಂದ 18 ತಿಂಗಳ ಒಳಗೆ ಪೂರ್ಣಗೊಳಿಸಬೇಕು. ಗಣತಿಯಲ್ಲಿ ನಮೂದಾದ ಎಲ್ಲಾ ನೇಕಾರರಿಗೂ ಗುರುತಿನ ಚೀಟಿಯನ್ನು ವಿತರಿಸಲಾಗುವುದು.

**3.7.3 (ಎಫ್) ಬಂಡವಾಳ ಹೂಡುವಿಕೆ**

ಗಣತಿ ಕಾರ್ಯ ಮತ್ತು ನೇಕಾರರಿಗೆ ಗುರುತಿನ ಚೀಟಿ ವಿತರಿಸುವುದಕ್ಕೆ ಆಗುವ ಸಂಪೂರ್ಣ ವೆಚ್ಚವನ್ನು ಭಾರತ ಸರ್ಕಾರವೇ ಭರಿಸುತ್ತದೆ. ಅರ್ಹ ಏಜೆನ್ಸಿಗಳಿಗೆ ಕಂತುಗಳ ಆಧಾರದ ಮೇಲೆ ಹಣವನ್ನು ಪಾವತಿಸಲಾಗುವುದು.

**3.7.3 (ಜಿ) ಮೇಲ್ವಿಚಾರಣೆ**

ಕೈಮಗ್ಗ ಅಭಿವೃದ್ಧಿ ಆಯುಕ್ತಕರ ಕಚೇರಿಯು ಗಣತಿ ಕಾರ್ಯ ಮತ್ತು ಗುರುತಿನ ಚೀಟಿ ವಿತರಣೆಯ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳುತ್ತದೆ.